



## 'ಪೊಸೆಸಿವ್‌ನೆಸ್' ಪ್ರೀತಿ ಅಲ್ಲ

ಈ ಟಿವಿಯ 'ನಿನ್ನೊಲುಮೆಯಿಂದಲೇ' ಧಾರಾವಾಹಿಯಲ್ಲಿ ಕಲಾವಿದರ ಅಭಿನಯ, ಹಿನ್ನೆಲೆ ಸಂಗೀತ, ಸಂಭಾಷಣೆ, ಕ್ಯಾಮೆರಾ ಸೇರಿದಂತೆ ಬಹುತೇಕ ಎಲ್ಲ ಅಂಶಗಳೂ ವಿನು ಬಳಂಜರ ಸಮರ್ಥ ನಿರ್ದೇಶನದಲ್ಲಿ ಸೊಗಸಾಗಿ ಮೂಡಿಬಂದಿವೆ. ಆದರೆ ನಾಯಕ ನಟ ಬೆಳ್ಳಿಸುಂದರ ಮದುವೆಗೆ ಮುಂಚೆ ಮತ್ತೊಂದು ಹೆಣ್ಣಿನ ಸಂಗ ಮಾಡಿದ್ದನ್ನು ಘೋರ ಅಪರಾಧ ಎಂಬಂತೆ ವೈಭವೀಕರಿಸಲಾಗಿದೆ! ಇದು ವಿಶ್ವದ ಅತಿದೊಡ್ಡ ಸಮಸ್ಯೆ ಎಂಬಂತೆ ಬಿಂಬಿಸಲಾಗುತ್ತಿದೆ!

ಒಂದು ಹೆಣ್ಣಿಗೆ ಒಂದು ಗಂಡು ಎಂಬುದು ಒಂದು ಆದರ್ಶ ವ್ಯವಸ್ಥೆಯೇ ಸರಿ. ಆದರೆ ಹೆಣ್ಣಾಗಲಿ, ಗಂಡಾಗಲಿ ಬಹುತೇಕರು ಪತಿ ಅಥವಾ ಪತ್ನಿಯ ಆಚೆಯ ಸಂಬಂಧ ಮಾಡಿದವರೇ ಇರುತ್ತಾರೆ! ಮರ್ಯಾದಾ ಪುರುಷೋತ್ತಮರು, ನಿಷ್ಠಾವಂತ ಪತ್ನಿಯರು ಇಲ್ಲವೇ ಇಲ್ಲವೆಂದಲ್ಲ. ಆದರೆ ಅವರ ಸಂಖ್ಯೆ ಕಡಿಮೆ! ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡು ಹೆಣ್ಣಿಗಿಂತ ಹೆಚ್ಚು ಲಂಪಟ ನಿಜ, ಆದರೆ ಆ ಲಂಪಟತೆ ಹೆಣ್ಣಿನ ಸಹಕಾರ ಇಲ್ಲದಿದ್ದರೆ ಹೇಗೆ ಸಾಧ್ಯ? ಫ್ಯೂಡಲ್ ವ್ಯವಸ್ಥೆಯ ಹೆಣ್ಣು ಬಹುಪತ್ನಿವಲ್ಲಭರನ್ನು- ಮನಸ್ಸಿರಲಿ, ಇಲ್ಲದಿರಲಿ ಒಪ್ಪಿಕೊಂಡದ್ದೇ ಹೆಚ್ಚು. ಅದು ಗಂಡಸಿನ ಶೋಷಣೆಯ ಪ್ರತೀಕ.

ಗಂಡನ ಸಹೋದರ ಸಂಬಂಧ, ಬಂಧು ಬಳಗವನ್ನು ಸಹನೆ, ತಾಳ್ಮೆಯಿಂದ ಸ್ವೀಕರಿಸುವ ಒಂದು ಒಳ್ಳೆಯ ಗುಣ ಫ್ಯೂಡಲ್ ವ್ಯವಸ್ಥೆಯ ಹೆಣ್ಣಿಗೆ ಇದೆ, ಪತ್ನಿಯ ತವರು ಮನೆಯವರನ್ನು ತನ್ನವರಂತೇ ನೋಡುವ ಸಹನೆಯ ಮನಸ್ಥಿತಿ ಗಂಡಿಗೂ ಇದೆ. ಆದರೆ ಶಿಕ್ಷಿತ ಮಧ್ಯಮವರ್ಗದ ಮಹಿಳೆಯರಲ್ಲಿ ಬಹುತೇಕರು; ಗಂಡ ನನ್ನ ಮನೆಗೆ ಮಾತ್ರ ಸೀಮಿತನಾಗಿರಲಿ, ಆತ ಕಷ್ಟದಲ್ಲಿರುವ ತನ್ನ ಅಕ್ಕ ತಮ್ಮಂದಿರ, ತಂದೆ ತಾಯಿಯರ ಹೊಣೆ ತೆಗೆದುಕೊಳ್ಳತಕ್ಕದ್ದಲ್ಲ ಎಂದು ಪತಿರಾಯರನ್ನು ಗೋಳು ಹೊಯ್ದುಕೊಳ್ಳುತ್ತಾರೆ. ಇದೊಂದು ವಿಪರ್ಯಾಸ. ಗಂಡ ತನ್ನ ಸ್ವಾಮ್ಯದಲ್ಲಿ ಇರಬೇಕು ಎಂಬ 'ಪೊಸೆಸಿವ್' ನಿಲುವು ಬೇರೆ. ಇಂತಹವರು ಎಷ್ಟೇ ಪತಿವ್ರತೆಯರಾದರೂ, ಸಂಕುಚಿತ ನಿಲುವಿನಿಂದ ಮನೆಯನ್ನು ನರಕ ಮಾಡುತ್ತಾರಲ್ಲ! ಇದಕ್ಕೇನೆನ್ನಬೇಕು? ಪ್ರೀತಿ ಎಂದರೆ ಅಂತಃಕರಣ, 'ಪೊಸೆಸಿವ್‌ನೆಸ್' ಅಲ್ಲ.

-ರುದ್ರೇಶ್ ಬಿ.ಅದರಂಗಿ, ಕೋಲಾರ

## ಅತಿಥಿಗಳು ಮತ್ತು ಕಿರುತೆರೆ

ಪರಿಚಯದವರು ಆಮಂತ್ರಣ ಪತ್ರಿಕೆ ನೀಡಿ ಮದುವೆಗೆ ಕರೆಯಲು ಬಂದಿದ್ದರು. ಆಗ ನಮ್ಮ ಮನೆಯಲ್ಲಿ ಯಾವುದೋ ಟಿವಿ ಚಾನೆಲ್‌ನಲ್ಲಿ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ಇದ್ದಕ್ಕಿದ್ದಂತೆ ಅಸಭ್ಯ ಎನಿಸುವ ಜಾಹೀರಾತು ಅದರ ಮಧ್ಯೆ ತೂರಿ ಬಂತು. ತಕ್ಷಣ ನಾನು ಚಾನೆಲ್ ಬದಲಾಯಿಸಿ, ಸಂಭಾವ್ಯ ಮುಜುಗರ ತಪ್ಪಿಸಿದೆ.

ಬಹುತೇಕ ಚಾನೆಲ್‌ಗಳಲ್ಲಿ ಕುಟುಂಬದವರು ಒಟ್ಟಿಗೆ ಕುಳಿತು ನೋಡುವಂತ ಕಾರ್ಯಕ್ರಮಗಳೇ ವಿರಳವಾಗುತ್ತಿವೆ. ಸಂಗೀತದ ಚಾನೆಲ್‌ಗಳನ್ನು ಹಾಕಿದರೆ, ಅರೆ ಬರೆ ಕ್ಯಾಬರೆ ತರಹ ಹುಚ್ಚಾಪಟ್ಟೆ ಕುಣಿತದ ಹಾಡುಗಳು. ನ್ಯೂಸ್ ಚಾನೆಲ್‌ಗಳಲ್ಲಿ 'ಅದೇ ರಾಗ ಅದೇ ಹಾಡು' ಎಂಬಂತೆ ದಿನಾಲು ಅದೇ ಸುದ್ದಿ! ಕೊನೆಗೆ ಮಕ್ಕಳ ಕಾರ್ಟೂನ್ ಚಾನೆಲ್‌ಗಳನ್ನೋ, ಸ್ಪೋರ್ಟ್ಸ್ ಚಾನೆಲ್‌ಗಳನ್ನೋ ಹಾಕಬೇಕು. ಇಲ್ಲವಾದಲ್ಲಿ ಚಂದನ ಚಾನೆಲ್ಲೇ ಗತಿ ಎಂಬಂತಾಗಿದೆ!

-ವಿಜಯಕುಮಾರ್ ಜೈನ್, ಹರಪನಹಳ್ಳಿ

## ಪ್ರತಿಕ್ರಿಯೆ

### ಸಾಹಿತಿ, ಕಲಾವಿದರ ಸಂದರ್ಶನ

'ಥಟ್ ಅಂತ ಹೇಳಿ' ದಸರಾ, ದೀಪಾವಳಿ ವಿಶೇಷ ಕಾರ್ಯಕ್ರಮಗಳಲ್ಲಿ ಹಿರಿಯ ಸಾಹಿತಿ, ಕಲಾವಿದರ ಸಂದರ್ಶನಗಳೇ ಅತ್ಯಂತ ಸೂಕ್ತ.

-ಸುಮತಿ ನೆಲ್ಲಿ, ತುಮಕೂರು

### ಅಮೋಘ 'ಮಹಾಭಾರತ'

ಉದಯ ವಾಹಿನಿಯಲ್ಲಿ 'ಮಹಾಭಾರತ' ಅಮೋಘವಾಗಿ ಮೂಡಿಬರುತ್ತಿದೆ. ಸೆಟಿಂಗ್ಸ್ ಸೊಗಸಾಗಿದೆ. ಈ ಹಿಂದೆ 'ಸೀತೆ'ಯಲ್ಲಿ ದಶರಥ, ಕೈಕೆ, ವಿಶ್ವಾಮಿತ್ರ, ಆಂಜನೇಯ, ವಾಲಿ, ಸುಗ್ರೀವ ಪಾತ್ರಗಳಲ್ಲಿ ಅಭಿನಯಿಸಿದ್ದ ಪರಿಣತ ಕಲಾವಿದರು 'ಮಹಾಭಾರತ'ದಲ್ಲೂ ಅಭಿನಯಿಸುತ್ತಿರುವುದು ಸಂತಸ ತಂದಿದೆ.

-ಪ್ರಭಾ ಕಾಳಪ್ಪ, ನಾಗೇಂದ್ರ, ಶ್ರೀಹರ್ಷ, ಹೊಳೆನರಸೀಪುರ

### ಭೀಮನಿಗೆ ಮೀಸೆ ಬೇಕೆ?

ಭೀಮನಿಗೆ ಸಾಮಾನ್ಯವಾಗಿ ಮೀಸೆ ಇರುವುದಿಲ್ಲ. ಆದರೆ 'ಮಹಾಭಾರತ'ದ ಭೀಮನಿಗೆ ಮೀಸೆ ಇದೆ. ಯಾವುದು ಸರಿ?

-ಆರ್.ರಾಮಸ್ವಾಮಿ ಅಯ್ಯಂಗಾರ್, ಬೆಂಗಳೂರು

### ಎರಡನೇ ಮದುವೆಗೆ ಅತಿ ಪ್ರಚಾರ!

ಸೈಫ್ ಅಲಿಖಾನ್‌ರ ಮೊದಲ ಪತ್ನಿ ಜೀವಂತ ಇದ್ದು, ಅಷ್ಟು ದೊಡ್ಡ ಮಗ ಇದ್ದರೂ, ಕರೀನಾ ಜತೆಗಿನ ಅವರ ಎರಡನೇ ಮದುವೆಗೆ ಇಷ್ಟೊಂದು ಅದ್ದೂರಿ ಪ್ರಚಾರ ನೀಡುವ ಅಗತ್ಯ ಇತ್ತೆ?

-ಡಿ.ಎಲ್.ನಾಗರಾಜ್, ಚನ್ನಗಿರಿ

### ತುಂಡುಡುಗೆಗೆ ಕಡಿವಾಣ

ಇತ್ತೀಚೆಗೆ ಪ್ರಸಾರಗೊಂಡ ಈ ಟಿವಿಯ ಎಳೆಯರ ಪ್ರತಿಭಾ ಕಾರ್ಯಕ್ರಮ ಉತ್ತಮವಾದುದೇನೋ ಸರಿ. ಆದರೆ ನಿರೂಪಕಿ ಧರಿಸಿದ ಉಡುಗೆ ಎಂಥವರನ್ನು ಮುಜುಗರ ಉಂಟುಮಾಡುವಂತಿತ್ತು. ಎಲ್ಲ ವಯೋಮಾನದವರು ವೀಕ್ಷಿಸುವ ಕಾರ್ಯಕ್ರಮ ನೀಡಬೇಕಾದುದು ಮಾಧ್ಯಮದ ಜವಾಬ್ದಾರಿ ಅಲ್ಲವೆ? ಅಸಭ್ಯ ಉಡುಗೆಗೆ ಇನ್ನಾದರೂ ಕಡಿವಾಣ ಹಾಕಬಲ್ಲರೆ? ಅದಕ್ಕಾಗಿ ಕಾನೂನು ಅಸ್ತ್ರದ ಅಗತ್ಯವಿದೆಯೇ?

-ಜಿ.ಎಂ. ಹೆಗಡೆ ತಾರಗೋಡ, ಶಿರಸಿ

### 5 ನಿಮಿಷದ ಕಥೆ!

ಅರ್ಧಗಂಟೆ ಕಾಲ ಪ್ರಸಾರವಾಗುವ ಪ್ರತಿ ಧಾರಾವಾಹಿಗಳಲ್ಲಿ 15ನಿಮಿಷಕ್ಕಿಂತ ಹೆಚ್ಚಿನ ಅವಧಿ ಜಾಹೀರಾತು ಇರುತ್ತದೆ. ಉಳಿದ 15ನಿಮಿಷದಲ್ಲಿ 5ನಿಮಿಷ ಮಾತ್ರ ಕಥೆ ಇರುತ್ತದೆ!

-ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

### ಇದೆಂಥಹ ಅಡುಗೆ?

'ಫಸ್ಟ್ ಗ್ಯಾಸ್ ಆನ್ ಮಾಡಿ ಬಾಣಲೆ ಇಟ್ಟು ಟೂ ಟೇಬಲ್‌ಸ್ಪೂನ್ ಆಯಿಲ್ ಹಾಕಿ... ಆಫ್ಟರ್ ಟೂ ಮಿನಿಟ್ಸ್ ಸ್ಲೈಸ್ಡ್ ಆನಿಯನ್, ಗಾರ್ಲಿಕ್, ಕುಕುಂಬರ್, ಸಾಲ್ಟ್ ಹಾಕಿ ಚೆನ್ನಾಗಿ ಫ್ರೈ ಮಾಡಿ. ನಂತರ ಹಾಟ್-ಸ್ಪೈಸಿ ಡಿಶ್ ರೆಡಿ ಇದ್ದು ವಿಶಲ್ ಸ್ಟಾರ್ಟ್.

ಮೇಲಿನ ವಾಕ್ಯಗಳಲ್ಲಿ ಕನ್ನಡ ಎಲ್ಲಿದೆ ಎಂದು ಹುಡುಕಬೇಕು. ನಮ್ಮ ಗ್ರಾಮೀಣ ಹಾಗೂ ನಗರದ ಬಡವ ಮಹಿಳೆಗೆ ಈ ಮೇಲಿನ ಭಾಷೆ ಎಷ್ಟರಮಟ್ಟಿಗೆ ಅರ್ಥವಾಗುತ್ತದೆ. ಕನ್ನಡದಲ್ಲಿ ಹೇಳಲು ದಾಡಿ ಏನು?

-ಕೆ.ಜಿ. ಮಂಜುಳ ವಿಠಲ್‌ರಾವ್, ಚಿತ್ರದುರ್ಗ

### ಮಗುವಿನ ಡಿಎನ್‌ಎ ಸಾಲದು

ಈ ಟಿವಿಯ 'ಚಿತ್ರಲೇಖ'ದಲ್ಲಿ ಮಗುವಿನ ತಂದೆ ಯಾರೆಂದು ಹೇಳಬೇಕಾದರೆ ಬರೀ ಮಗುವಿನ ಡಿಎನ್‌ಎ ಪರೀಕ್ಷೆ ಮಾಡಿದರೆ ಸಾಕು ಎಂಬ ಅರ್ಥದ ಮಾತಿದೆ. ಬರೀ ಮಗು ಸಾಲದು. ಗಂಡನ ಹಾಗೂ ಬೇರೆಯ ಸಂಬಂಧ ಮಾಡಿರುವ ಗಂಡಸಿನ ಡಿಎನ್‌ಎ ಸಹ ಟೆಸ್ಟ್ ಮಾಡಿ ಅವುಗಳನ್ನು ಮ್ಯಾಚ್ ಮಾಡಿದಾಗ ಮಾತ್ರ ತೀರ್ಮಾನಕ್ಕೆ ಬರಬಹುದು. ಹಾಗಾಗಿ ಇಲ್ಲಿ ಪ್ರೇಮ್ ಹಾಗೂ ಅನಿರುದ್ಧನ ಡಿಎನ್‌ಎ ಸಹ ಮಾಡಬೇಕಾಗುತ್ತದೆ.

-ಸಿ.ಎಸ್.ಶ್ರೀನಿವಾಸನ್, ಮೈಸೂರು